<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

ಸಿ.ಸಿ. ಸಂಃ **84/2018**

| | | |
|---|---|---|
| ಸಾಕ್ಷಿಯ ಹೆಸರುಃ | ಅನಿತಾ | ಫ್ರಾಸಾಃಃ 2 |
| ಗಂಡನ ಹೆಸರುಃ | ಸ್ವಾಮಿ | ಚಾಸಾಃಃ 2 |
| ವಯಸ್ಸುಃ | 28 ವರ್ಷ | ಪ್ರಮಾಣೀಕರಿಸಿದ ದಿಃ 29.07.2026 |
| ಉದ್ಯೋಗಃ | ಶಿಕ್ಷಕಿ | |
| ವಾಸ ಸ್ಥಳಃ | ಹುಣಸೂರು | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ಚಾಸಾ-1 ನನ್ನ ಗಂಡನಿರುತ್ತಾನೆ. ಆರೋಪಿತನ ಪರಿಚಯ ಇರುತ್ತದೆ. ನಮ್ಮಗಳ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿತನು ಚಾಸಾ-1 ರವರಿಗೆ ಮತ್ತು ನನಗೆ ಅವಾಚ್ಯಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ದೊಣ್ಣೆಯಿಂದ ಹಲ್ಲೆ ಮಾಡಿರುವುದಿಲ್ಲ, ಕೈಯಿಂದ ಹೊಡೆದಿರುವುದಿಲ್ಲ ಮತ್ತು ಚಾಸಾ-1 ರವರ ಕತ್ತಿನ ಪಟ್ಟಿ ಹಿಡಿದು ಎಳೆದಿರುವುದಿಲ್ಲ. ನಾನು ಈ ಕುರಿತು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿಃ 22.11.2017 ರಂದು ರಾತ್ರಿ 8 ಗಂಟೆ ಸಮಯದಲ್ಲಿ ಪಂಚವಳ್ಳಿ ಗ್ರಾಮದ ಮಹದೇವಪ್ಪನವರ ಅಂಗಡಿ ಮುಂದೆ ಹಾದು ಹೋಗಿರುವ ಪಂಚವಳ್ಳಿ-ಕಡೆಮನುಗನಹಳ್ಳಿ ರಸ್ತೆಯ ಅಂಚಿನಲ್ಲಿ ನಡೆದುಕೊಂಡು ಮನೆಗೆ ಹೋಗುತ್ತಿದ್ದಾಗ ಆರೋಪಿತನು ಚಾಸಾ-1 ರವರನ್ನು ಅಡ್ಡಗಟ್ಟಿ ಚಿಕ್ಕಪ್ಪನ ಹತ್ತಿರ ಏನಂತ ನನ್ನ ವಿಚಾರವನ್ನು ಹೇಳಿದೆ ಬೋಳಿಮಗನೇ, ಸೂಳೆಮಗನೆ, ಊರಿಂದ ಊರಿಗೆ ಬಂದು ಎಷ್ಟೊಂದು

ಧಿಮಾಕು ಎಂಬಿತ್ಯಾದಿಯಾಗಿ ಅವಾಚ್ಯಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಿ ಕೈಯಿಂದ ಕಪಾಳದ ಹತ್ತಿರ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ನೆಲಕ್ಕೆ ಕೆಡವಿ ದೊಣ್ಣೆಯಿಂದ ಬಲಗಾಲಿನ ಮಂಡಿ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಂತರದಲ್ಲಿ ಆರೋಪಿತನು ನಮ್ಮ ಮನೆ ಹತ್ತಿರ ಬಂದು ಚಾಸಾ-1 ರವರನ್ನು ಕುರಿತು ನಿನ್ನ ಗಂಡ ಎಲ್ಲಿ ಲೋಫರ್ ಎಂದು ಅವಾಚ್ಯಶಬ್ದಗಳಿಂದ ಬೈದು ಕೈಗಳಿಂದ ಅವರ ಮೈ ಕಾಲುಗಳಿಗೆ ಹೊಡೆದು ನನಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಇವತ್ತಲ್ಲಾ ನಾಳೆ ನಿಮ್ಮನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು ನಾನು ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ಹೇಳಿಕೆಯ ಭಾಗವಾದ ' ನಾನು ಮೇಲ್ಕಂಡ ವಿಳಾಸದಲ್ಲಿ -------------------ಮನುವನ್ನು ಮತ್ತೆ ನೋಡಿದರೆ ಗುರುತಿಸುತ್ತೇನೆ' ಅನ್ನು ಓದಿ ಹೇಳಲಾಗಿ ಸಾಕ್ಷಿಯು ಸದರಿ ಹೇಳಿಕೆಯ ಭಾಗವನ್ನು ಅಲ್ಲಗಳೆದಿದ್ದು ಸಾಕ್ಷಿಯ ಒಪ್ಪದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ